# ಗುದ ಭಾಗದ ಸಾಮಾನ್ಯ ಕಾಯಿಲೆಗಳು

ಡಾ. ಪ್ರಶಾಂತ. ಕೆ. ಭಟ್
ಅಸೋಸಿಯೇಟ್ ಪ್ರೊಫೆಸರ್ ,ಶಸ್ತ್ರಚಿಕಿತ್ಸಕರು
ಶಲ್ಯತಂತ್ರ ವಿಭಾಗ
ಶ್ರೀ ಧ. ಮ. ಆಯುರ್ವೇದ ಕಾಲೇಜು ಮತ್ತು ಆಸ್ಪತ್ರೆ , ಉದ್ಯಾವರ

ಗುದಭಾಗಕ್ಕೆ ಸಂಬಂಧಪಟ್ಟ ತೊಂದರೆಗಳು ಜೀವನದ ಒಂದು ಹಂತದಲ್ಲಿ ಪ್ರತಿಯೊಬ್ಬರನ್ನೂ ಕಾಡಿಸುವ ಕಾಯಿಲೆಗಳು. ಗುಹ್ಯಭಾಗದಲ್ಲಿರುವ ತೊಂದರೆಯಾದ್ದರಿಂದ, ಅಂಜಿಕೆ ಅಥವಾ ನಾಚಿಕೆಯಿಂದಾಗಿ ಸಾಮಾನ್ಯ ಜನರು ಈ ಕಾಯಿಲೆಗಳನ್ನು ಉಪೇಕ್ಷೆ ಮಾಡುತ್ತಾರೆ. ಯಾರಲ್ಲಿಯೂ ಹೇಳಲಿಕ್ಕಾಗದ ,ಪ್ರಚಲಿತದಲ್ಲಿರದ ಕಾಯಿಲೆಗಳಾಗಿರುವುದರಿಂದಾಗಿ ಮಾಹಿತಿಯ ಕೊರತೆಯೂ ಇರುತ್ತದೆ. ಈ ಎಲ್ಲ ಕಾರಣಗಳಿಂದ ವ್ಯಕ್ತಿಯು ವೈದ್ಯಕೀಯ ತಪಾಸಣೆಗೆ ಒಳಗಾಗದೆ ಕಾಯಿಲೆ ಉಲ್ಬಣಿಸಿ ಕ್ಲಿಷ್ಟವಾಗಿ, ಗುಣವಾಗದ ಹಂತಕ್ಕೆ ತಲುಪುವ ಪರಿಸ್ಥಿತಿ ಉಂಟಾಗುತ್ತದೆ. ಆಯುರ್ವೇದದಲ್ಲಿ ಗುದಭಾಗಕ್ಕೆ ಸಂಬಂಧಪಟ್ಟ ಕಾಯಿಲೆಗಳ ಬಗ್ಗೆ ಸಮಗ್ರವಾಗಿ ವಿವರಿಸಲ್ಪಟ್ಟಿದೆ. ಈ ನಿಟ್ಟಿನಲ್ಲಿ ಗುದಭಾಗದಲ್ಲಿ ಸಾಮಾನ್ಯವಾಗಿ ಕಾಣಿಸಿಕೊಳ್ಳುವ ಕಾಯಿಲೆಗಳ ಬಗ್ಗೆ ಸಂಕ್ಷಿಪ್ತ ಮಾಹಿತಿಯನ್ನು ಇಲ್ಲಿ ನೀಡಲಾಗಿದೆ.

## ಪರಿಕರ್ತಿಕ (ಫಿಷರ್)

ಇದು ಗುದದ್ವಾರಕ್ಕೆ ಸಂಬಂಧಪಟ್ಟ ಅತೀ ಸಾಮಾನ್ಯ ಕಾಯಿಲೆ. ಪ್ರತಿಯೊಬ್ಬರೂ ತಮ್ಮ ಜೀವಿತಾವಧಿಯಲ್ಲಿ ಒಮ್ಮೆಯಾದರೂ ಈ ಕಾಯಿಲೆಯನ್ನು ಅನುಭವಿಸಿರುತ್ತಾರೆ. ಇದರಲ್ಲಿ ಗುದದ್ವಾರದಲ್ಲಿ ಒಂದು ಗಾಯವಾಗಿ ಮಲವಿಸರ್ಜನೆ ಮಾಡುವ ಸಂದರ್ಭದಲ್ಲಿ ಅತೀವ ನೋವಿನ ಅನುಭವವಾಗುತ್ತದೆ. ಮಲವು ಗಟ್ಟಿಯಾಗಿ ಅತೀವ ಮಲಬದ್ಧತೆ ಕಾಡುತ್ತದೆ. ಕೆಲವೊಮ್ಮೆ ನೋವು ಹಲವಾರು ಗಂಟೆಗಳವರೆಗೂ ಕಾಡುವುದುಂಟು. ಗಾಯದಿಂದಾಗಿ ಮಲಪ್ರವೃತ್ತಿಯ ಸಮಯದಲ್ಲಿ ರಕ್ತಸ್ರಾವವೂ ಆಗಬಹುದು. ಕ್ಷಿಪ್ರವಾಗಿ ಸೂಕ್ತ ಔಷಧೀಯ ಚಿಕಿತ್ಸೆಗೆ ಒಳಗಾಗದಿದ್ದರೆ ಕಾಲಾಂತರದಲ್ಲಿ ಕಾಯಿಲೆ ಮುಂದುವರಿದು ಗುದದ್ವಾರದಲ್ಲಿ ಗಂಟು ಉತ್ಪತ್ತಿಯಾಗಿ ಚರ್ಮ ಗಡುಸಾಗಿ ಮಲಪ್ರವರ್ತನೆಗೆ ಯಾವಾಗಲೂ ತೊಡಕಾಗುವ ಪರಿಸ್ಥಿತಿ ಉಂಟಾಗಿ ಶಸ್ತ್ರ ಚಿಕಿತ್ಸೆಯೇ ಬೇಕಾಗಬಹುದು.ಇದು ಮಕ್ಕಳಾದಿಯಾಗಿ ವಯೋವೃದ್ದರನ್ನೂ ಬಿಡದ ಸಾಮಾನ್ಯ ಕಾಯಿಲೆ. ಮಹಿಳೆಯರಲ್ಲಿ ಪ್ರಸವದ ಸಂದರ್ಭದಲ್ಲಿ ಅತಿಯಾಗಿ ಕಾಡುತ್ತದೆ. ಆಯುರ್ವೇದದಲ್ಲಿ ಈ ಕಾಯಿಲೆಯ ಎಲ್ಲಾ ಹಂತದಲ್ಲೂ ಚಿಕಿತ್ಸೆ ಲಭ್ಯವಿದ್ದು ರೋಗವನ್ನು ಸಂಪೂರ್ಣವಾಗಿ ಗುಣಪಡಿಸಬಹುದಾಗಿದೆ.

## ಅರ್ಶಸ್ (ಪೈಲ್ಸ್)

ಇದು ಗುದನಾಳದಲ್ಲಿರುವ ರಕ್ತನಾಳಗಳಿಗೆ ಸಂಬಂಧಪಟ್ಟ ಸಾಮಾನ್ಯ ಕಾಯಿಲೆ. ಇದು ಅನುವಂಶೀಯವಾಗಿಯೂ ಕಾಡಬಹುದು. ಇಲ್ಲಿ ರಕ್ತನಾಳಗಳ ಮೇಲಿನ ಅತೀವ ಉತ್ತಡದಿಂದ ರಕ್ತನಾಳಗಳು ಉಬ್ಬಿ ಅವುಗಳಿಂದ ರಕ್ತಸ್ರಾವವಾಗುತ್ತದೆ. ಕಾಲಾಂತರದಲ್ಲಿ ಉಬ್ಬಿದ ರಕ್ತನಾಳಗಳು ಹೊರಬಂದು ಗುದದ್ವಾರದಲ್ಲಿ ಮಾಂಸಾಂಕುರ ಜಾರಿದ ಅನುಭವವಾಗುತ್ತದೆ. ಕ್ಲಪ್ತ ಸಮಯದಲ್ಲಿ ಸರಿಯಾದ ಚಿಕಿತ್ಸೆ ಮಾಡದಿದ್ದರೆ ಮಾಂಸಾಂಕುರಗಳು ಸಿಕ್ಕಿಹಾಕಿಕೊಂಡು ಅತೀವ ನೋವು, ರಕ್ತಸ್ರಾವ ಮತ್ತು ಸೋಂಕು ಕಾಣಿಸಿಕೊಂಡು ಪ್ರಾಣಾಪಾಯವೂ ಆಗಬಹುದು. ಈ ಮೂಲವ್ಯಾಧಿಯನ್ನು ಅವಗಣಿಸಿದರೆ ಕಾಲಾಂತರದಲ್ಲಿ ಅತೀವ ರಕ್ತಸ್ರಾವವಾಗಿ ರಕ್ತಹೀನತೆಯಿಂದ ಹಲವಾರು ತೊಂದರೆಗಳೂ ಉಂಟಾಗುತ್ತವೆ. ನೋವು ಇಲ್ಲದ ರಕ್ತಸ್ರಾವವೇ ಈ ಕಾಯಿಲೆಯ ಪ್ರಥಮ ಲಕ್ಷಣ. ಮಲಾಶಯದ

ಕ್ಯಾನ್ಸರಿನಲ್ಲೂ ಇದೇ ಲಕ್ಷಣವಿರುವುದರಿಂದ ತಜ್ಞ ವೈದ್ಯರ ಬಳಿಯೇ ಸೂಕ್ತವಾಗಿ ತಪಾಸಿಸಿ ಔಷಧ ಪ್ರಯೋಗ ಮಾಡಬೇಕಾಗುತ್ತದೆ. ಆಯುರ್ವೇದದಲ್ಲಿ ಶಸ್ತ್ರಚಿಕಿತ್ಸೆಯೂ ಸಹಿತವಾಗಿ ಕಾಯಿಲೆಯ ಎಲ್ಲಾ ಹಂತಗಳಲ್ಲೂ ಸೂಕ್ತ ಚಿಕಿತ್ಸೆ ಲಭ್ಯವಿದೆ. ಔಷಧೀಯ ಚಿಕಿತ್ಸೆಯೊಂದಿಗೆ ಆಯುರ್ವೇದದ ವಿಶೇಷ ಚಿಕಿತ್ಸೆಯಾದ ಕ್ಷಾರ ಚಿಕಿತ್ಸೆಯೂ ನೋವಿಲ್ಲದೆ ಸುಲಭವಾಗಿ ನೆರವೇರಿಸಬಹುದಾದ ಪರಿಣಾಮಕಾರಿಯಾದ ವಿಧಾನ.

<u>ಭಗಂದರ (ಫಿಸ್ಟುಲಾ )</u>

ಇದು  ಗುದನಾಳಕ್ಕೆ ಸಂಬಂಧಪಟ್ಟ ಗ್ರಂಥಿಗಳ ಸೋಂಕಿನಿಂದ ಉಂಟಾಗುವ ಕಾಯಿಲೆ. ಅತ್ಯಂತ ಸಾಮಾನ್ಯವಲ್ಲದಿದ್ದರೂ ಹಲವಾರು ಜನರಲ್ಲಿ ಈ ಕಾಯಿಲೆ ಕಂಡುಬರುತ್ತದೆ. ಈ ಕಾಯಿಲೆಯಲ್ಲಿ ಗುದದ್ವಾರದ ಪಕ್ಕದಲ್ಲಿ ಸಣ್ಣ ಮೊಳಕೆ ಉತ್ಪತ್ತಿಯಾಗಿ ಅದರಿಂದ ಆಗಾಗ್ಗೆ ರಕ್ತಮಿಶ್ರಿತ ಕೀವು ಸ್ರಾವವಾಗುತ್ತದೆ. ಪ್ರಾರಂಭಿಕ ಹಂತದಲ್ಲಿ ಸೋಂಕಿನಿಂದ ಅತೀವ ನೋವು ಮತ್ತು ಬಾವು ಉತ್ಪತ್ತಿಯಾಗಿ ಒಡೆದು ಕೀವು ಸ್ರಾವವಾಗುತ್ತದೆ. ಮುಂದೆ ಈ ಸೋಂಕು ಮುಂದುವರೆದು ಚರ್ಮದ ಅಡಿಯಲ್ಲಿ ನಾಳದ ರೀತಿಯಲ್ಲಿ ಗುದನಾಳದ ಒಳಗೂ  ಹೊರಗೂ ಪಸರಿಸಿ ನಾಡೀವ್ರಣ  ಉಂಟುಮಾಡುತ್ತದೆ. ಉಪೇಕ್ಷಿಸಿದರೆ ಗುದದ್ವಾರದ ಪಕ್ಕದಲ್ಲೇ ಹಲವಾರು ರಂಧ್ರಗಳು ಉಂಟಾಗಿ ಅವುಗಳಿಂದ ಯಾವಾಗಲೂ ಕೀವುಮಿಶ್ರಿತ ರಕ್ತಸ್ರಾವ ಮತ್ತು ನೋವು ಉಂಟಾಗಿ ಗುಣಪಡಿಸಲಾಗದ ಕಾಯಿಲೆಯಾಗಿ ಮಾರ್ಪಾಡು ಹೊಂದುತ್ತದೆ. ಹಾಗಾಗಿ ಪ್ರಾರಂಭಿಕ ಹಂತದಲ್ಲೇ ತಜ್ಞ ವೈದ್ಯರಿಂದ ಸರಿಯಾಗಿ ತಪಾಸಿಸಿ ತ್ವರಿತವಾಗಿ ಕಾಯಿಲೆಯನ್ನು ಸಂಪೂರ್ಣವಾಗಿ ಗುಣಪಡಿಸುವ ಅನಿವಾರ್ಯತೆ ಇರುತ್ತದೆ. ಇದೊಂದು ಸಂಕೀರ್ಣವಾದ ಕಾಯಿಲೆಯಾಗಿದ್ದು ಶಸ್ತ್ರ ಚಿಕಿತ್ಸೆಯಿಂದ ಮಾತ್ರವೇ  ಗುಣಪಡಿಸಲ್ಪಡುವ ಕಾಯಿಲೆ. ಔಷಧೀಯ ಚಿಕಿತ್ಸೆ ಕೇವಲ ತಾತ್ಕಾಲಿಕ ಉಪಶಮನವನ್ನು ಮಾತ್ರ ಕೊಡಬಲ್ಲದು. ಆಯುರ್ವೇದದಲ್ಲಿ ಇದರ ಬಗ್ಗೆ  ಶಸ್ತ್ರ ಚಿಕಿತ್ಸೆ ಸಮೇತವಾಗಿ  ಅತ್ಯಂತ ವಿಸ್ತೃತವಾದ ಮಾಹಿತಿಯು ದಾಖಲಿಸಲ್ಪಟ್ಟಿದೆ.  ಈ ರೋಗವು ಶಸ್ತ್ರ ಚಿಕಿತ್ಸೆಯ ನಂತರವೂ ಪುನರಾವರ್ತನೆಯಾಗುವ ಸಂಭವವಿದ್ದು ಈ ನಿಟ್ಟಿನಲ್ಲಿ ಆಯುರ್ವೇದದ ಕ್ಷಾರಸೂತ್ರ ಚಿಕಿತ್ಸೆಯು ಅತ್ಯಂತ ಪರಿಣಾಮಕಾರಿಯಾದ  ಸಾಮಾನ್ಯರಿಗೂ ಕೈಗೆಟುಕುವ ಚಿಕಿತ್ಸೆಯಾಗಿದೆ.

<u>ಪ್ರವಾಹಿಕ (ಪ್ರಾಕ್ಟೈಟಿಸ್ )</u>

ಇದು ಗುದಾಶಯದಲ್ಲಿ ಉಂಟಾಗುವ ಉರಿಯೂತ. ಈ ಕಾಯಿಲೆಯಲ್ಲಿ ಗುದನಾಳದಲ್ಲಿ ನೋವು ಉಂಟಾಗಿ  ಸಿಂಬಳ ಮಿಶ್ರಿತ ಮಲಪ್ರವೃತ್ತಿಯಾಗುತ್ತದೆ.  ಹೊಟ್ಟೆಯ ಕೆಳಭಾಗದಲ್ಲಿ ನೋವು ಉಂಟಾಗಿ ಆಗಾಗ್ಗೆ ಮಲಪ್ರವೃತ್ತಿಯ ಒತ್ತಡ ಉಂಟಾಗುತ್ತದೆ. ಬಿಕ್ಕಿದರೂ ಸರಿಯಾಗಿ ಮಲಪ್ರವೃತ್ತಿಯಾಗದೆ ಸ್ವಲ್ಪ ಸ್ವಲ್ಪವಾಗಿ ಸಿಂಬಳಮಿಶ್ರಿತ ಸ್ರಾವವಾಗಿ ಅತ್ಯಂತ ತ್ರಾಸವಾಗುತ್ತದೆ. ಕೆಲವೊಮ್ಮೆದಿನದಲ್ಲಿ  ೧೦-೧೫ ಸಲವೂ ಶೌಚಾಲಯಕ್ಕೆ ಹೋಗುವ ಪ್ರಸಂಗ ಉಂಟಾಗಬಹುದು. ಈ ಸಂದರ್ಭದಲ್ಲಿ ವೈದ್ಯರಲ್ಲಿ ಸೂಕ್ತವಾಗಿ ತಪಾಸಿಸಿ ಕಾಯಿಲೆಯ ಮೂಲಕಾರಣವನ್ನು ತಿಳಿದುಕೊಳ್ಳಬೇಕಾಗುತ್ತದೆ.  ಇಲ್ಲವಾದಲ್ಲಿ ವರ್ಷಗಟ್ಟಲೆ ಕಾಯಿಲೆಯನ್ನು ಅನುಭವಿಸಬೇಕಾಗುತ್ತದೆ. ಆಯುರ್ವೇದದಲ್ಲಿ ಸಂದರ್ಭಕ್ಕೆ ಅನುಗುಣವಾಗಿ ಹೊಟ್ಟೆಗೆ ತೆಗೆದುಕೊಳ್ಳುವ ಔಷಧಿಯೊಂದಿಗೆ ಗುದದ್ವಾರದ ಮುಖಾಂತರವೂ ಪ್ರಯೋಗಿಸುವ ಹಲವಾರು ಔಷಧಿಗಳ ಮುಖಾಂತರ ಕಾಯಿಲೆಯನ್ನು ಉಪಶಮನಗೊಳಿಸಬಹುದು ಅಥವಾ ಗುಣಪಡಿಸಲೂಬಹುದು.

## ಅರ್ಬುದ (ಕ್ಯಾನ್ಸರ್)

ಮಲಾಶಯದ ಕ್ಯಾನ್ಸರ್ ಸಾಮಾನ್ಯವಾದ ಕಾಯಿಲೆಯಲ್ಲದಿದ್ದರೂ ಈಗೀಗ ಸಾಮಾನ್ಯವೆಂಬಂತೆ ಕಂಡುಬರುತ್ತದೆ. ಸಾಧಾರಣವಾಗಿ ಇದು ೫೫ ವರ್ಷ ದಾಟಿದ ವ್ಯಕ್ತಿಗಳಲ್ಲಿ ಕಂಡುಬಂದರೂ ಈಗೀಗ ಸಣ್ಣಪ್ರಾಯದವರಲ್ಲೂ ಕಂಡುಬರುತ್ತಿದೆ. ನನ್ನ ವೈದ್ಯಕೀಯ ಅನುಭವದಲ್ಲಿ ೧೮ರ ಪ್ರಾಯದವರಲ್ಲೂ ಈ ಕಾಯಿಲೆಯನ್ನು ಕಂಡು ದಂಗಾದೆ. ಅರ್ಬುದವು ಮಲಾಶಯದಲ್ಲಿ ತಾನಾಗಿಯೇ ಸ್ವತಂತ್ರವಾಗಿ ಬೆಳೆಯಬಹುದು ಅಥವಾ ಬೇರೆ ಕಾಯಿಲೆಯ ಉಲ್ಬಣಿತ ಸ್ಥಿತಿಯೂ ಆಗಬಹುದು. ಅರ್ಬುದದ ಮುಖ್ಯ ಲಕ್ಷಣ ಗುದ ಮಾರ್ಗದಲ್ಲಿ ನೋವಿಲ್ಲದ ರಕ್ತಸ್ರಾವ. ಪೈಲ್ಸ್ ಕಾಯಿಲೆಯಲ್ಲೂ ಇದೇ ಮುಖ್ಯ ಲಕ್ಷಣವಾದದ್ದರಿಂದ ಕ್ಯಾನ್ಸರ್ ಕಾಯಿಲೆಯನ್ನು ಮೂಲವ್ಯಾಧಿಯೆಂದು ತಪ್ಪಾಗಿ ನಿರ್ಧರಿಸುವ ಸಂಭವವೇ ಅಧಿಕ. ಇದಲ್ಲದೇ ಮಲಬಧ್ಧತೆ , ಮಲಪ್ರವೃತ್ತಿಯಾದಮೇಲೂ ಇನ್ನೂ ಮಲ ಇದೆ ಎನ್ನುವ ಅನುಭವ , ಯಾವಾಗಲೂ ಬೆಳಿಗ್ಗೆ ರಕ್ತ ಮತ್ತು ಕೀವು ಮಿಶ್ರಿತ ದ್ರವರೂಪೀ ಮಲಪ್ರವೃತ್ತಿ , ಹೀಗೆ ಹಲವಾರು ಪ್ರಬೇಧಗಳಲ್ಲಿ ರೋಗಲಕ್ಷಣ ಕಾಣಿಸಿಕೊಳ್ಳಬಹುದು. ಆದ್ದರಿಂದ ಎಲ್ಲಾ ಲಕ್ಷಣಗಳನ್ನೂವಿಮರ್ಶಿಸಿ, ಸಮರ್ಪಕವಾಗಿ ಅವಲೋಕಿಸಿ , ಬೆರಳಿನ ಮುಖಾಂತರ ಸ್ಪರ್ಶಿಸಿ , ಗುದನಾಡೀ ಯಂತ್ರದ ಮೂಲಕ ಪರೀಕ್ಷೆ ಮಾಡಿ, ಅರ್ಬುದದ ಸಣ್ಣ ಅಂಶವನ್ನು ತೆಗೆದು ಪ್ರಯೋಗಾಲಯದ ಪರೀಕ್ಷೆ ಮಾಡಿ ರೋಗನಿರ್ಧಾರ ಮಾಡಬೇಕಾಗುತ್ತದೆ. ಆ ನಂತರ ಚಿಕಿತ್ಸೆಯನ್ನು ನೀಡಬೇಕಾಗುತ್ತದೆ. ಆಯುರ್ವೇದದಲ್ಲಿಯೂ ಅರ್ಬುದಕ್ಕೆ ಶಸ್ತ್ರ ಚಿಕಿತ್ಸೆಯೇ ಮೂಲಚಿಕಿತ್ಸೆ. ಅದಲ್ಲದೆ ಕ್ಷಾರ ಚಿಕಿತ್ಸೆಯನ್ನೂ ಸಂದರ್ಭಾನುಸಾರ ಪ್ರಯೋಗಿಸಬಹುದಾಗಿದೆ. ಆದರೆ ಮಲಾಶಯದ ಅರ್ಬುದ ಆಯುರ್ವೇದದಲ್ಲಿ ಅಸಾಧ್ಯ ಕಾಯಿಲೆಯೆಂದೇ ಪರಿಗಣಿತವಾಗಿದೆ. ಹಾಗಾಗಿ ಲಾಕ್ಷಣಿಕ ಮತ್ತು ತಾತ್ಕಾಲಿಕ ಉಪಶಮನವನ್ನು ಮಾತ್ರ ಆಯುರ್ವೇದದಿಂದ ನಿರೀಕ್ಷಿಸಬಹುದಾಗಿದೆ..

ಈ ಲೇಖನದಲ್ಲಿ ಗುದಭಾಗಕ್ಕೆ ಸಂಬಂಧಪಟ್ಟ ಕೆಲವೊಂದು ಸಾಮಾನ್ಯ ಕಾಯಿಲೆಗಳ ಬಗ್ಗೆ ಮಾತ್ರ ಮಾಹಿತಿಯನ್ನು ನೀಡಿದ್ದು, ಇನ್ನೂ ಹಲವಾರು ರೋಗಗಳು ಬಾಧಿಸುತ್ತವೆ. ಗುದಭಾಗಕ್ಕೆ ಸಂಬಂಧಪಟ್ಟ ಯಾವುದೇ ತೊಂದರೆಯಿದ್ದರೂ ತ್ವರಿತವಾಗಿ ಸೂಕ್ತ ವೈದ್ಯರನ್ನು ಸಂದರ್ಶಿಸಿ, ಸಮಗ್ರವಾಗಿ ಪರೀಕ್ಷಿಸಿ, ಸಮರ್ಪಕವಾದ ಚಿಕಿತ್ಸೆಯಿಂದ ಮಾತ್ರವೇ ರೋಗಗಳನ್ನು ಸಂಪೂರ್ಣವಾಗಿ ಗುಣಪಡಿಸಬಹುದಾಗಿದೆ.





